R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

ಭಾಗ –೬ ಸಿ Part – 6 C	ಕಲಬುರಗಿ, ಗುರುವಾರ, ೨೫, ಜೂನ್, ೨೦೨೬ (ಆಷಾಢ, ೦೪, ಶಕವರ್ಷ, ೧೯೪೮) KALBURGI, THURSDAY, 25, JUNE, 2026 (ASHADHA, 04, SHAKAVARSHA, 1948)	ನಂ. ೦೪ No. 04

ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ ಜಿಲ್ಲೆ ಬಳ್ಳಾರಿ-583101
OFFICE OF THE DEPUTY COMMISSIONER, BELLARY DISTRICT, BELLARY-583101
Telephone : 08392-277100. Fax : 08392- Email: dcbellary@gmail.com

ಸಂ.ಕಂ/ಚುನಾವಣೆ/01/2026-27 ದಿನಾಂಕ: 24.06.2026

ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993ರ 5ನೇ ಪ್ರಕರಣದ ಉಪ ಪ್ರಕರಣ (5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ ಭಾ.ಆ.ಸೇ., ಆದ ನಾನು ಈ ಹಿಂದೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ. ಕೆಪಿಆರ್‌ಸಿ-ಡಿಡಿ4.70.2020 ದಿನಾಂಕ:20-3-2021ರಲ್ಲಿ ನೀಡಿದ ಅನುಮತಿಯಂತೆ, ಈ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ ಸಂ.ಕಂ.ಚುನಾವಣೆ.18.2020-21 ದಿನಾಂಕ:-19-07-2024 ರ ಮೂಲಕ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಗ್ರಾಮ ವಕ್ರಾಣಿ ಕ್ಯಾಂಪ್ (ಬಸವ ರಾಜಪ್ಪ ನಗರ) ಪ್ರದೇಶವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 4(2)(ಎ) ಪ್ರಕಾರ 1-ಕೊಳಗಲ್ಲು ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡಿ ವಿಶೇಷ ರಾಜ್ಯ ಪತ್ರಿಕೆಯಲ್ಲಿ ದಿ:-19-07-2024 ರಂದು ಹೊರಡಿಸಲಾಗಿರುವ ಹಿನ್ನಲೆಯಲ್ಲಿ, ದಿನಾಂಕ:-10.06.2026 ರಂದು ಸರ್ಕಾರ ಹೊರಡಿಸಿರುವ ತಿದ್ದುಪಡಿ ಸುತ್ತೋಲೆ ಯಲ್ಲಿ ಸೂಚಿಸಿರುವಂತೆ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕು ವ್ಯಾಪ್ತಿಯಲ್ಲಿ ಪುನರ್ ರಚನೆಯಾದ ಗ್ರಾಮ ಪಂಚಾಯಿತಿಗೆ ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆಯನ್ನು ಈ ಕೆಳಕಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ, ಕೊಷ್ಟಕ-1ರ ಅಂಕಣ (1) ರಲ್ಲಿ ಕ್ಷೇತ್ರದ ಸಂಖ್ಯೆ, ಅಂಕಣ (2) ರಲ್ಲಿ ಪ್ರತಿ ಕ್ಷೇತ್ರದ ಹೆಸರುಗಳನ್ನು, ಅಂಕಣ (3) ರಲ್ಲಿ ಪ್ರತಿ ಕ್ಷೇತ್ರದ ವ್ಯಾಪ್ತಿಯನ್ನು ಹಾಗೂ ಅಂಕಣ (4) ರಲ್ಲಿ ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಯನ್ನು ನಿಗಧಿಪಡಿಸಿ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆ ವ್ಯಾಪ್ತಿಯಲ್ಲಿ ಪುನರ್ ರಚನೆಯಾದ ಈ ಕೆಳಕಂಡ ಗ್ರಾಮ ಪಂಚಾಯಿತಿ ಚುನಾಯಿತ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸದಸ್ಯ ಸ್ಥಾನಗಳ ಸಂಖ್ಯೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ 07 (ಏಳು) ದಿನಗಳ ಒಳಗಾಗಿ ಅಂದರೆ ದಿನಾಂಕ: 01-07-2026, ಸಂಜೆ 5.00 ಗಂಟೆಯ ಒಳಗೆ ಸಲ್ಲಿಸಲು ತಿಳಿಸಿದೆ. ಸದರಿ ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಈ ಕಛೇರಿಯಿಂದ ನಮೂದಿಸಿದ ದಿನಾಂಕದೊಳಗೆ

ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಜಿಲ್ಲಾಡಳಿತ/ಜಿಲ್ಲಾಧಿಕಾರಿ ಕಛೇರಿ ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ.

ವಿಳಾಸ:- ಖುದ್ದಾಗಿ/ಅಂಚೆ ಮೂಲಕ:- ಜಿಲ್ಲಾಧಿಕಾ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿ (Old DC Office), Opposite to Railway Station, ಬಳ್ಳಾರಿ-583101.

ಗ್ರಾಮ ಪಂಚಾಯಿತಿ ಕ್ಷೇತ್ರವಾರು ಸದಸ್ಯ ಸ್ಥಾನಗಳ ಹಂಚಿಕೆ ವಿವರಗಳು

ತಾಲ್ಲೂಕಿನ ಹೆಸರು:	ಬಳ್ಳಾರಿ
ಗ್ರಾಮ ಪಂಚಾಯಿತಿ ಸಂಖ್ಯೆ ಮತ್ತು ಹೆಸರು:	01-ಕೊಳಗಲ್ಲು
ಒಟ್ಟು ಕ್ಷೇತ್ರಗಳ ಸಂಖ್ಯೆ:	11

ಕೋಷ್ಟಕ-1

ಕ್ಷೇತ್ರದ ಸಂಖ್ಯೆ	ಪ್ರಾದೇಶಿಕ ಚುನಾವಣಾ ಕ್ಷೇತ್ರ ಹೆಸರು	ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿ	ಹಂಚಿಕೆಯಾಗಿರುವ ಸ್ಥಾನಗಳ ಸಂಖ್ಯೆ
1	ಕೊಳಗಲ್ಲು	1. ಮಠದ ವೀರಭದ್ರಯ್ಯ ಮನೆಯಿಂದ ಪೂರಪ್ಪನಗೌಡ ಮನೆಯವರೆಗೆ, ಬಾರಿಕರ ಬೀದಿ. 2. ತಿಪ್ಪೇಸ್ವಾಮಿ ಮನೆಯಿಂದ ಶಿವಕುಮಾರ ಮನೆಯವರೆಗೆ, ನಿಟ್ಟುವಟ್ಟಿಯವರ ಬೀದಿ. 3. ವೈ.ತಿಮ್ಮಾರೆಡ್ಡಿ ಮನೆಯಿಂದ ನಾಗಲಾಪುರ ಬಸವನಗೌಡ ಮನೆಯವರೆಗೆ, ರೆಡ್ಡಿಯವರ ಬೀದಿ. 4. ವೀರಾರೆಡ್ಡಿ ಮನೆಯಿಂದ ಎರಪ್ಪಗೌಡ ಮನೆಯವರೆಗೆ, ಸೀಮಾಲರವರ ಬೀದಿ.	3
2	ಕೊಳಗಲ್ಲು	1. ನರಸಿಂಹಸ್ವಾಮಿ ದೇವಸ್ಥಾನದ ಪಕ್ಕದ ಮನೆಗಳು, ಕೊಳಗಲ್ಲು. 2. ಪಂಪಾಪತಿ ದೇವಸ್ಥಾನದ ಪಕ್ಕದ ಮನೆಗಳು, ಕೊಳಗಲ್ಲು. 3. ಗಡಿಗೇರು ಬಾವಿಯ ಸುತ್ತಮುತ್ತಲಿನ ಮನೆಗಳು, ಕೊಳಗಲ್ಲು.	3
3	ಕೊಳಗಲ್ಲು	1. ಕುರುಬರ ಬೀದಿಯಿಂದ ಹಂಚಕಲು, ಕೋಟಾಲು, ನರಸಿಂಹರೆಡ್ಡಿ ಮನೆಯಿಂದ ಮಲ್ಲಾಪುರದ ಮನೆಯವರೆಗೆ, ಕೊಳಗಲ್ಲು 2. ಕುರುಬರ ಬೀದಿ, ವಡ್ಡರ ಓಣಿ, ಕೊಳಗಲ್ಲು 3. ಪಂಚಾಯಿತಿ ಬೀದಿ, ವಗ್ಗೆರೆ, ಕೊಳಗಲ್ಲು 4. ಬಳ್ಳಾರಿ ರಸ್ತೆಯಿಂದ ಕಾಲುವೆ ಪಕ್ಕದ ದಾರಿ, ಕೊಳಗಲ್ಲು 5. ಕೆರೆಕಟ್ಟೆ ಬೀದಿ, ಕೊಳಗಲ್ಲು	3
4	ಕೊಳಗಲ್ಲು	1. ಕಾರಮಂಚಿ ಮನೆಯಿಂದ ಕೆ.ದರ್ಮಣ್ಣನ ಮನೆಯವರೆಗೆ, ನ್ಯಾಯಬೆಲೆ ಅಂಗಡಿ, ಕೊಳಗಲ್ಲು ಭಾಗಶಃ.	3
5	ಕೊಳಗಲ್ಲು	1. ಡಂಭಾರ ಓಣಿಯಿಂದ ನೀಲಕಂಠಸ್ವಾಮಿ ಮನೆಯವರೆಗಿನ ಮನೆಗಳು, ಕೊಳಗಲ್ಲು.	2

		2. ಹ.ಹನುಮಂತಪ್ಪ ಮನೆಯಿಂದ ಶಿವರಾಮ ರೆಡ್ಡಿ ಮನೆಯವರೆಗೆ ಮನೆಗಳು, ಕೊಳಗಲ್ಲು.	
6	ಕೊಳಗಲ್ಲು	1. ಗುರುಶಾಂತಪ್ಪ ಮನೆಯಿಂದ ದಮ್ಮೂರು ಓಣಿ ಕೊನೆಯವರೆಗೆ, ಕೋಳಗಲ್ಲು. 2. ನೀರಾವರಿ ಇಲಾಖೆಯಿಂದ ಜಗದೀಶ ಸೀಮೆ ಎಣ್ಣೆ ಓಣಿಯ ಮನೆಗಳು, ಕೋಳಗಲ್ಲು	4
7	ಕೊಳಗಲ್ಲು	1. ಕೊಳಗಲ್ಲು ಮೇನ್ ರೋಡ್ ಕಾಲುವೆ ಗಡ್ಡೆಯ ಮನೆಗಳು, ಕೊಳಗಲ್ಲು ಭಾಗಶಃ	1
8	ಕೊಳಗಲ್ಲು	1. ಟಿ.ಹನುಮಂತಪ್ಪನ ಮನೆಯ ಪಕ್ಕದ ಮನೆಗಳು, ಕೊಳಗಲ್ಲು.	3
9	ಕೊಳಗಲ್ಲು	1. ಬಸ್ ಸ್ಟ್ಯಾಂಡ್ ಹತ್ತಿರದ ಮನೆಗಳಿಂದ ಗ್ರಾ.ಪಂ.ಕಾರ್ಯಾಲಯದವರೆಗೆ, ಕೊಳಗಲ್ಲು. 2. ಸುಬ್ರಮಣ್ಯಂ ಮನೆಯಿಂದ ಸ.ಮಾ.ಹಿ.ಪ್ರಾ.ಶಾ. ಹಿಂದಿನ ಮನೆಗಳು, ಕೊಳಗಲ್ಲು 3. ಚಲವಾದಿಕೇರಿ, ಹರಿಜನಕೇರಿಯ ಮನೆಗಳು, ಕೊಳಗಲ್ಲು 4. ಹರಿಜನಕೇರಿ ಬಳ್ಳಾರಿ ರಸ್ತೆಯಲ್ಲಿರುವ ಮನೆಗಳು, ಕೊಳಗಲ್ಲು. 5. ಶಿವಪುತ್ರಯ್ಯಸ್ವಾಮಿ ಮನೆಯ ಪಕ್ಕದ ಮನೆಗಳು, ಕೊಳಗಲ್ಲು	3
10	ಕೊಳಗಲ್ಲು	1. ಕೃಷ್ಣನಗರ ಕ್ಯಾಂಪ್, ಕೊಳಗಲ್ಲು 2. ಲಕ್ಷ್ಮಿಶ್ರೀನಿವಾಸ ಕ್ಯಾಂಪ್, ಕೊಳಗಲ್ಲು 3. ಶ್ರೀರಾಮನಗರ,ಕೊಳಗಲ್ಲು.	4
11	ವಕ್ಕಾಣಿ ಕ್ಯಾಂಪ್ (ಮುಲ್ಲಂಗಿ ಬಸವ ರಾಜಪ್ಪ ನಗರ)	ವಕ್ಕಾಣಿ ಕ್ಯಾಂಪ್ (ಮುಲ್ಲಂಗಿ ಬಸವ ರಾಜಪ್ಪ ನಗರ) ಪೂರ್ಣ.	2
		ಒಟ್ಟು	31

(ನಾಗೇಂದ್ರ ಪ್ರಸಾದ್ ಕೆ, ಭಾ.ಆ.ಸೇ.)
ಜಿಲ್ಲಾಧಿಕಾರಿ,
ಬಳ್ಳಾರಿ ಜಿಲ್ಲೆ, ಬಳ್ಳಾರಿ.

MADESHWARA NARASIMHA MURTHY JAYASIMHA